# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 1035 (1246) |
| 2 | ಸದಸ್ಯರ ಹೆಸರು | : | ಡಾ|| ಎಂ.ಜಿ. ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ: | : | 21-08-2025 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವೈದ್ಯರು ಪಾಲಿಕೆಯ ಸಾರ್ವಜನಿಕ ಆರೋಗ್ಯ ವಿಭಾಗದಲ್ಲಿ ಸ್ನಾತಕೋತ್ತರ ಕ್ಲಿನಿಕಲ್ ಪದವಿಗಳನ್ನು ಪಡೆದು ಸ್ತ್ರೀರೋಗ, ಜನರಲ್ ಮೆಡಿಸಿನ್, ಚರ್ಮರೋಗ ತಜ್ಞರು ಇತ್ಯಾದಿ ಕಾನೂನು ಬಾಹಿರವಾಗಿ ಸಾರ್ವಜನಿಕ ಆರೋಗ್ಯ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಸದರಿಯವರು ಯಾವುದೇ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಹುದ್ದೆಗಳನ್ನು ಪಡೆಯದೇ ಸಾರ್ವಜನಿಕ ಆರೋಗ್ಯ ಹುದ್ದೆಗಳನ್ನು ಅಲಂಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಾರ್ವಜನಿಕ ಆರೋಗ್ಯ ವಿಭಾಗದಲ್ಲಿ ಸ್ನಾತಕೋತ್ತರ ಕ್ಲಿನಿಕಲ್ ಪದವಿಗಳನ್ನು ಪಡೆದು, ಸಾರ್ವಜನಿಕ ಆರೋಗ್ಯ ವಿಭಾಗದಲ್ಲಿ ಆರೋಗ್ಯಾಧಿಕಾರಿಗಳು ಮತ್ತು ಆರೋಗ್ಯ ವೈದ್ಯಾಧಿಕಾರಿಗಳಾಗಿ ಸಾರ್ವಜನಿಕ ಆರೋಗ್ಯ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ. |
| ಆ) | ಬಂದಿದ್ದಲ್ಲಿ, ಈ ಕುರಿತಂತೆ ಸರ್ಕಾರ ಕೈಗೊಂಡ ಕ್ರಮವೇನು; (ವಿವರ ಒದಗಿಸುವುದು) | |
| ಇ) | ಸಾರ್ವಜನಿಕ ಆರೋಗ್ಯ ವೃಂದದ ಅಧಿಕಾರಿಗಳಿಗೆ ಒಂದು ವರ್ಷದ ತರಬೇತಿಯ ನಂತರ ಕ್ಲಿನಿಕಲ್ ತಜ್ಞರಾಗಿ ಮುಂದುವರೆಯಲು ಸಿ & ಆರ್ ನಿಯಮಾವಳಿಯಲ್ಲಿ ಅವಕಾಶ ವಿದೆಯೇ; (ಸಂಪೂರ್ಣ ವಿವರ ನೀಡುವುದು) | ಸಾರ್ವಜನಿಕ ಆರೋಗ್ಯ ವೃಂದದ ಅಧಿಕಾರಿಗಳಿಗೆ ಒಂದು ವರ್ಷದ ತರಬೇತಿಯ ನಂತರ ಕ್ಲಿನಿಕಲ್ ತಜ್ಞರಾಗಿ ಮುಂದುವರೆಯಲು ಸಿ & ಆರ್ ನಿಯಮಾವಳಿಯಲ್ಲಿ ಅವಕಾಶ ಇರುವುದಿಲ್ಲ. |
| ಈ) | ಕರ್ನಾಟಕ ಮೆಡಿಕಲ್ ಕೌನ್ಸಿಲ್ ನಿಯಮಗಳನುಸಾರ, ಎರಡು ಸ್ನಾತಕೋತ್ತರ ಪದವಿಗಳನ್ನು ಪಡೆದ ವೈದ್ಯರು ನಿಯಮಾವಳಿಗಳನ್ನು ಮೀರಿ ಎರಡೆರಡು ವಿಭಾಗಗಳಲ್ಲಿ ವೈದ್ಯರು ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತಂತೆ ಸರ್ಕಾರವು ಇವರುಗಳ ಮೇಲೆ ಸೂಕ್ತ ಕ್ರಮವಹಿಸುವುದೇ? (ವಿವರ ಒದಗಿಸುವುದು) | ಪಾಲಿಕೆಯ ಆರೋಗ್ಯ ವಿಭಾಗದಲ್ಲಿ ಕರ್ನಾಟಕ ಮೆಡಿಕಲ್ ಕೌನ್ಸಿಲ್ ನಿಯಮಗಳಾನುಸಾರ, ಎರಡು ಸ್ನಾತಕೋತ್ತರ ಪದವಿಗಳನ್ನು ಪಡೆದ ವೈದ್ಯರಿಗೆ ಕೆಲಸದ ಒತ್ತಡದ ಹಿನ್ನಲೆಯಲ್ಲಿ, ಹೆಚ್ಚುವರಿ ಜವಾಬ್ದಾರಿಯನ್ನು ಪಾಲಿಕೆಯಲ್ಲಿ ವಹಿಸಲಾಗಿರುತ್ತದೆ. |

**ಸಂಖ್ಯೆ:ನಅಇ 335 ಬಿಬಿಎಲ್ 2025**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ